ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	1074
ಪ್ರಶ್ನೆ ಕೇಳಿರುವ ವಿಧಾನಸಭೆಯ ಸದಸ್ಯರು	ಶ್ರೀ ಕೋನರೆಡ್ಡಿ ಎನ್ .ಹೆಚ್ . (ನವಲಗುಂದ)
ಉತ್ತರ ನೀಡುವ ಸಚಿವರು	ಮಾನ್ಯ ಕೃಷಿ ಸಚಿವರು
ಉತ್ತರಿಸಬೇಕಾದ ದಿನಾಂಕ	24.07.2024

ವಿಷಯ: ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ರೈತರಿಗೆ ಸರಿಯಾಗಿ ಬೆಳೆ ವಿಮೆ ಪರಿಹಾರ ವಿತರಣೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಲ್ಲಿ ಅರ್ಹ ರೈತರಿಗೆ ಸರಿಯಾಗಿ ಬೆಳೆ ವಿಮೆ ಪರಿಹಾರ ವಿತರಣೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ .
ಆ)	2021-22 ರಿಂದ 2023-24 ರವರೆಗೆ ಈ ಯೋಜನೆಯಿಂದ ರೈತರಿಗೆ ಪರಿಹಾರ ವಿತರಣೆ ಮಾಡಲಾಗಿದೆಯೇ; (ವಿವರ ನೀಡುವುದು)	2021-22 ರಿಂದ 2023-24 ನೇ ಸಾಲಿನವರೆಗೆ ಅನುಷ್ಠಾನ ವಿಮಾ ಕಂಪನಿಗಳಿಂದ ಒಟ್ಟು 37.82 ಲಕ್ಷ ರೈತರಿಗೆ ರೂ .4202.90 ಕೋಟಿಗಳ ಬೆಳೆ ವಿಮೆ ಪರಿಹಾರ ಮೊತ್ತವನ್ನು ಇತ್ಯರ್ಥಪಡಿಸಲಾಗಿರುತ್ತದೆ . ವಿವರ ಕೆಳಕಂಡಂತಿದೆ . (ಮೊತ್ತ ರೂ.ಕೋಟಿಗಳಲ್ಲಿ)

ವರ್ಷ	ರೈತ ಪ್ರಸ್ತಾವನೆಗಳ ಸಂಖ್ಯೆ (ಲಕ್ಷಗಳಲ್ಲಿ)	ಬೆಳೆ ವಿಮೆ ಪರಿಹಾರ ಮೊತ್ತ
2021-22	8.63	875.72
2022-23	12.43	1356.80
2023-24	16.76	1970.38
ಒಟ್ಟು	**37.82**	**4202.90**

ಕ್ರ. ಸಂ.	ಪ್ರಶ್ನೆ	ಉತ್ತರ
ಇ)	ರೈತರಿಗೆ ಸರಿಯಾದ ವಿಮಾ ಪರಿಹಾರ ವಿತರಣೆ ಮಾಡಲು ಸರ್ಕಾರ ಹೊಸ ಯೋಜನೆ ರೂಪಿಸಿದೆಯೇ ;	ಪ್ರಸ್ತುತ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಮಾರ್ಗಸೂಚಿಯನ್ವಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ . ಸದ್ಯಕ್ಕೆ ಸರ್ಕಾರವು ಯಾವುದೇ ಹೊಸ ಯೋಜನೆಯನ್ನು ರೂಪಿಸಿರುವುದಿಲ್ಲ .
ಈ)	2016-17 ರಲ್ಲಿ ನವಲಗುಂದ ವಿಧಾನಸಭಾ ಕ್ಷೇತ್ರದ	2016-17 ರಲ್ಲಿ ನವಲಗುಂದ ವಿಧಾನಸಭಾ ಕ್ಷೇತ್ರದ ಅಣ್ಣಿಗೇರಿ ಹಾಗೂ ಶಿರಗುಪ್ಪಿ

	ಅಣ್ಣಿಗೇರಿ ಹಾಗೂ ಶಿರಗುಪ್ಪಿ ಹೋಬಳಿ ರೈತರಿಗೆ 36 ಕೋಟಿ ಬೆಳೆ ವಿಮೆ ಪರಿಹಾರ ಘೋಷಣೆ ಆಗಿದ್ದರೂ ಇದುವರೆಗೂ ರೈತರ ಖಾತೆಗಳಿಗೆ ಜಮೆ ಆಗದೇ ಇರುವುದಕ್ಕೆ ಕಾರಣವೇನು?	ಹೋಬಳಿಯಲ್ಲಿ ಘೋಷಣೆಯಾಗಿರುವ ರೂ.13.91 ಕೋಟಿಗಳ ಬೆಳೆ ವಿಮೆ ಪರಿಹಾರ ಮೊತ್ತವು ರೈತರ ಖಾತೆಗೆ ಜಮೆಯಾಗಿರುತ್ತದೆ . ಯಾವುದೇ ಬೆಳೆ ವಿಮೆ ಪರಿಹಾರ ಮೊತ್ತವು ಜಮೆಯಾಗಲು ಬಾಕಿ ಇರುವುದಿಲ್ಲ .

ಕೃಷಿ ನಿರ್ದೇಶಕರು

ಕರ್ನಾಟಕ ಸರ್ಕಾರ
(ಕೃಷಿ ಇಲಾಖೆ)

ಕೃಷಿ ಆಯುಕ್ತರ ಕಾರ್ಯಾಲಯ, ನಂ.01, ಶೇಷಾದ್ರಿ ರಸ್ತೆ, ಬೆಂಗಳೂರು-01. ಸಂಖ್ಯೆ:ಜಕೃನಿ(ಬೆವಿ)/LAQ-1074/2024-25
ದಿನಾಂಕ:18.07.2024

ರವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೇ,

ವಿಷಯ: ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಕೋನರೆಡ್ಡಿ
ಎನ್.ಹೆಚ್.
(ನವಲಗುಂದ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1074 ಗೆ
ಉತ್ತರಿಸುವ ಕುರಿತು.
*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನಸಭೆಯ ಸದಸ್ಯರಾದ ಶ್ರೀ ಕೋನರೆಡ್ಡಿ ಎನ್.ಹೆಚ್. (ನವಲಗುಂದ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1074 ಗೆ ಮಾಹಿತಿ ಸಿದ್ಧಪಡಿಸಿ ಈ ಪತ್ರದೊಂದಿಗೆ ಲಗತ್ತಿಸಿ ಸಲ್ಲಿಸಲಾಗಿದೆ.

ತಮ್ಮ
ವಿಶ್ವಾಸಿ,

ಕೃಷಿ
ನಿರ್ದೇಶಕರು